12.03.2026.

ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ (ವಿಧಾನ ಸಭಾ ಕ್ಷೇತ್ರ) ರವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ-544 (651)ಕ್ಕೆ ಉತ್ತರ

ಉತ್ತರಿಸಬೇಕಾದ ದಿನಾಂಕ 12-03-2025

| | | |
|---|---|---|
| ಇ | ಮೂಡಬಿದ್ರೆ ಕಾರ್ಕಳ KSRTC ಬಸ್ಸುಗಳಿಗೆ ಪ್ರಯಾಣಿಕರಿಗೆ ವಿದ್ಯಾರ್ಥಿ ಪಾಸ್ಸು, ಶಕ್ತಿ ಯೋಜನೆಯಡಿ ಉಚಿತ ಪ್ರಯಾಣದ ಅವಕಾಶ (ವಿವರ ನೀಡುವುದು) | ಮೂಡಬಿದ್ರೆ ಕಾರ್ಕಳ ಮಾರ್ಗದಲ್ಲಿ, ಪ್ರಯಾಣಿಕರ ವಿದ್ಯಾರ್ಥಿ ಪಾಸು ಶಕ್ತಿ ಯೋಜನೆಯಡಿ ಬಗ್ಗೆ, ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| ಈ | ಪ್ರಸ್ತುತ ಮಂಗಳೂರು-ಮೂಡಬಿದ್ರೆ-ಕಾರ್ಕಳ ಮಾರ್ಗದಲ್ಲಿ ಕಾರ್ಯಾಚರಣೆಯಾಗುತ್ತಿರುವ KSRTC ಬಸ್ಸುಗಳ ಸಂಖ್ಯೆ, ಶಕ್ತಿ ಯೋಜನೆ ಜಾರಿಯಾದಾಗಿನಿಂದ ಪ್ರಸ್ತುತ ಸಂಚರಿಸುತ್ತಿರುವ ಬಸ್ಸುಗಳಲ್ಲಿ ಪ್ರಯಾಣಿಸುವವರ ಸಂಖ್ಯೆ ಎಷ್ಟು? ಮಹಿಳೆಯರ ಸಂಖ್ಯೆ ಎಷ್ಟು? (ವಿವರ ನೀಡುವುದು) | ಮಂಗಳೂರು-ಮೂಡಬಿದ್ರೆ-ಕಾರ್ಕಳ ವಯಾ ಕೈಕಂಬ-ಗುರುಪುರ ಮಾರ್ಗದಲ್ಲಿ 04 ವಾಹನಗಳಿಗೆ ಖಾಯಂ ಪರವಾನಗಿ ನೀಡಲು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ರವರಲ್ಲಿ ದಿನಾಂಕ 21-07-2023ರಂದು ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ದಿನಾಂಕ 10-12-2024ರಂದು 4 ಖಾಯಂ ಪರವಾನಗಿಗಳು ಮಂಜೂರಾಗಿರುತ್ತವೆ. ಸದರಿ ಖಾಯಂ ಪರವಾನಗಿಗಳನ್ನು, ಉಪಯೋಗಿಸಿಕೊಂಡು ದಿನಾಂಕ 13-12-2024ರಿಂದ ಮಂಗಳೂರು ವಿಭಾಗ ವತಿಯಿಂದ 4 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ದಿನಾಂಕ 05-11-2024ರಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ ನಡೆದಿದ್ದು, ಮಂಗಳೂರು-ಮೂಡಬಿದ್ರೆ-ಕಾರ್ಕಳ ಮಾರ್ಗದಲ್ಲಿ 08 ಹೊಸ ಪರವಾನಗಿಗಳ ಅರ್ಜಿ ಮಂಜೂರು ಮಾಡುವ ಬಗ್ಗೆ ವಿಷಯವು ಚರ್ಚಿಸಲಾಗಿದ್ದು, ನಿಗಮದ ವತಿಯಿಂದ ಪ್ರಾಧಿಕಾರವು ಮಂಡಿಸಲಾಗಿರುತ್ತದೆ. ಸದರಿ ಸಭೆಯ ನಡವಳಿಯು ಬಂದಿರುವುದಿಲ್ಲ. ಸದರಿ ಪರವಾನಗಿಗಳು ಮಂಜೂರಾದ ನಂತರ ಮಂಗಳೂರು-ಮೂಡಬಿದ್ರೆ-ಕಾರ್ಕಳ ಮಾರ್ಗದಲ್ಲಿ ಹೆಚ್ಚಿನ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು.<br><br>ಮುಂದುವರೆದು, ದಿನಾಂಕ 13-12-2024ರಿಂದ 04-03-2025ರ ವರೆಗೆ ಸದರಿ ಮಾರ್ಗದ ಬಸ್ಸುಗಳಲ್ಲಿ ಒಟ್ಟು 1,04, 088 ಪ್ರಯಾಣಿಕರು ಪ್ರಯಾಣಿಸಿದ್ದು, ಅದರಲ್ಲಿ 83,086 ಮಹಿಳಾ ಪ್ರಯಾಣಿಕರು ಪ್ರಯಾಣಿಸಿರುತ್ತಾರೆ. |

ವ್ಯವಸ್ಥಾಪಕ ನಿರ್ದೇಶಕರು